ಸಾಂಪ್ರದಾಯಿಕ ಸರವಾಗಿ ಮಾತ್ರ ಮಹಿಳೆಯರು ಬಳಸುತ್ತಿದ್ದ ಮಂಗಳಸೂತ್ರಕ್ಕೂ ಈಗ ಫ್ಯಾಷನ್ ಗಾಳಿ ಬೀಸಿದೆ. ಮದುವೆ ದಿನ ಗಂಡ ಕಟ್ಟುವ ತಾಳಿ ಸರ ಅದೇ ದಿನಕ್ಕೆ ಮಾತ್ರ ಸೀಮಿತವಾಗುವಂಥ ಕಾಲ ಬಂದಿದೆ. ಫ್ಯಾಷನ್‌ಗಾಗಿ ಇದೀಗ ಮಹಿಳೆಯರು ಶುಭ ಕಾರ್ಯಕ್ಕೊಂದು, ಪಾರ್ಟಿಗೊಂದು, ದಿನನಿತ್ಯ ಧರಿಸಿಕೊಳ್ಳಲು ಮತ್ತೊಂದು ಎಂಬಂತೆ ತಾಳಿ ಸರದಲ್ಲೂ ಮಾರ್ಪಾಡು ಮಾಡಿಕೊಂಡಿದ್ದಾರೆ. ಬಾಲಿವುಡ್ ನಟಿಯರಂತೂ ತಾಳಿಸರದ ಬದಲಿಗೆ ಕರಿಮಣಿಯನ್ನು ಬ್ರೇಸ್ಲೆಟ್‌ನಲ್ಲೋ, ಪೆಂಡೆಂಟ್‌ನಲ್ಲೋ ಮಾತ್ರ ಬಳಸಿ ಫ್ಯಾಷನ್ ಮೆರೆಯುತ್ತಿದ್ದಾರೆ.

# ಮಂಗಳಸೂತ್ರದಲ್ಲೂ ಫ್ಯಾಷನ್ ಥಳುಕು!

■ ಪವಿತ್ರಾ ಶೆಟ್ಟಿ



ಚಿತ್ರ: ಇರ್ಷಾದ್ ಮಹಮ್ಮದ್

ಈ ವರ್ಷ ಬಾಲಿವುಡ್‌ನ ಸಾಲು ಸಾಲು ತಾರೆಯರು ವೈವಾಹಿಕ ಬದುಕಿಗೆ ಕಾಲಿಟ್ಟದ್ದು ಗೊತ್ತೇ ಇದೆ. ಅದರೆ ಅವರ ಕುತ್ತಿಗೆಯಲ್ಲಿ ಎರಡೆಳೆಯ ಇಷ್ಟುದ್ದದ ಕರಿಮಣಿ ಸರ ನೇತಾಡಿದ್ದು ಯಾವ ಫೋಟೋದಲ್ಲಾದರೂ ನಿಮಗೆ ಕಾಣಿಸಿದೆಯೇ? ಪ್ರಿಯಾಂಕಾ ಚೋಪ್ರಾ ಕುತ್ತಿಗೆ ಬದಲಿಗೆ ಕೈಗೆ ಕಪ್ಪು ಮಣಿ ಸರ ಧರಿಸಿದ್ದಾಳೆ, ಸೋನಂ ಕಪೂರ್ ಬ್ರೇಸ್ಲೆಟ್ ಮಾದರಿ ಕರಿಮಣಿ ಧರಿಸಿದ್ದಾಳೆ ಎಂಬ ಊಹಾಪೋಹಗಳು ಕೇಳಿಬರುತ್ತಿತ್ತು. ತಾರೆಗಳನ್ನೇ ಅನುಸರಿಸಿ ಫ್ಯಾಷನ್ ಹುಟ್ಟಿಕೊಳ್ಳುವ ಈ ಕಾಲದಲ್ಲಿ ಅಭಿಮಾನಿಗಳೂ ಈ ಕ್ರಮವನ್ನು ಅನುಸರಿಸಲು ಹೆಚ್ಚು ಸಮಯ ಬೇಕಾಗಲಿಕ್ಕಿಲ್ಲ!

ವಿಶ್ವಸುಂದರಿ ಪಟ್ಟಕ್ಕೇರಿದ ನಮ್ಮ ಸುಂದರಿ ಐಶ್ವರ್ಯಾ ರೈ ಚಿತ್ರಗಳನ್ನು ಹುಡುಕುತ್ತಾ ಹೋದರೆ ಆಕೆ ತವರೂರು ಮಂಗಳೂರಿನ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುವಾಗ ಮಾತ್ರ ಕರಿಮಣಿ ಹಾಕಿಕೊಂಡು ಪೂಜೆಗಳಲ್ಲಿ ಪಾಲ್ಗೊಳ್ಳುವುದು ಸ್ಪಷ್ಟವಾಗುತ್ತದೆ. ಸಂಪ್ರದಾಯದಡಿಯಲ್ಲಿ ಕಡ್ಡಾಯವಾಗಿ ಧರಿಸಬೇಕು ಎಂಬಂತಿದ್ದ ಕರಿಮಣಿ ಹೀಗೆ ಪೂಜೆ ಪುನಸ್ಕಾರಗಳಿಗೆ ಸೀಮಿತಗೊಂಡಿದ್ದು ಹೇಗೆ? ತಾಳಿಯ ಜಾಗವನ್ನು ಆಕರ್ಷಕ ವಿನ್ಯಾಸದ ಪೆಂಡೆಂಟ್‌ಗಳು (ಬಹುತೇಕರಲ್ಲಿ ವಜ್ರದ್ದು) ಆಕ್ರಮಿಸಿಕೊಂಡದ್ದು ಹೇಗೆ?

ಬಾಲಿವುಡ್ ಅಂಗಳದಲ್ಲಿ ಕರಿಮಣಿ ಸರ

ಕರಿಮಣಿ ಸರ ಕೊರಳಲಿದ್ದರೆ ಚೆಂದ. ಆದರೆ ಇತ್ತೀಚೆಗೆ ಬಾಲಿವುಡ್ ನಟಿಯರು ಈ ನಂಬಿಕೆಯನ್ನು ಬದಲಿಸಿಬಿಟ್ಟಿದ್ದಾರೆ. ಈ ಮೂಲಕ ವೈವಾಹಿಕ ಬದುಕಿನ ಸೂಚಕವಾಗಿರುವ ಮಂಗಳಸೂತ್ರ ಕೊರಳಿಗಿಂತ ಹೆಚ್ಚಾಗಿ ಕರಗಳನ್ನೇ ಅಲಂಕರಿಸಿವೆ. ಇದಕ್ಕೆ ನಾಂದಿ ಹಾಡಿದ್ದು ನಟಿ ಶಿಲ್ಪಾ ಶೆಟ್ಟಿ ಎಂದೆನ್ನಬಹುದು.

ಪತಿ ರಾಜ್ ಕುಂದ್ರಾ ಕಟ್ಟಿರುವ ಮಂಗಳಸೂತ್ರವನ್ನು ಶಿಲ್ಪಾ ಮಣಿಕಟ್ಟಿಗೆ ಕಟ್ಟಿಕೊಂಡು ಕ್ಯಾಮೆರಾ ಕಣ್ಣಿಗೆ ಫೋಸ್ ನೀಡಿದ್ದಾರೆ. ತಾಳಿಯನ್ನು ಬ್ರೇಸ್ಲೆಟ್ ರೀತಿಯಲ್ಲಿ ಕೈಗೆ ಕಟ್ಟಿಕೊಂಡಿದ್ದರು. ಈ ಬಗ್ಗೆ ಸಾಕಷ್ಟು ಪರ ವಿರೋದಗಳು ವ್ಯಕ್ತವಾಗಿದ್ದವು. ‘ಮಾಡರ್ನ್ ಧಿರಿಸು ತೊಟ್ಟಾಗ ಕೊರಳಿಗೆ ಮಂಗಳಸೂತ್ರವನ್ನು ಕಟ್ಟಿಕೊಳ್ಳಲು ಮುಜುಗರವಾಗುತ್ತದೆ. ಆದ್ದರಿಂದ ಅಂತಹ ಸಂದರ್ಭಗಳಲ್ಲಿ ಬ್ರೇಸ್ಲೆಟ್ ಮಾದರಿ ಮುಂಗೈಗೇ ಕರಿಮಣಿ ಸರ ಧರಿಸಿಕೊಳ್ಳುವೆ. ಎಲ್ಲೋ ಒಟ್ಟಿನಲ್ಲಿ ಅದನ್ನು ಪ್ರತಿನತ್ಯವೂ ಕಟ್ಟಿಕೊಳ್ಳುವೆ’ ಎಂದು ಶಿಲ್ಪಾಶೆಟ್ಟಿ ವಿವರಣೆ ಕೊಟ್ಟಿದ್ದರು.

ಇನ್ನು ಸೋನಂ ಕಪೂರ್ ಮಂಗಳಸೂತ್ರದಲ್ಲಿ ಗಂಡನ ಜನ್ಮ ರಾಶಿ, ಚಿಹ್ನೆಗಳನ್ನು ಮೂಡಿಸಿ ಬ್ರೇಸ್ಲೆಟ್‌ನಂತೆ ಧರಿಸಿ ಸುದ್ದಿಯಾಗಿದ್ದರು.

ಪ್ರಿಯಾಂಕಾ ಮದುವೆಗಿಂತ ಮೊದಲೇ ತಾಳಿ ಕಟ್ಟಿಕೊಂಡ ಅವಳ ಫೋಟೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಇದನ್ನು ಕೆಟ್ಟ ದೃಷ್ಟಿ ಬೀಳದಿರಲಿ ಎಂದು ಕಟ್ಟಿಕೊಂಡಿದ್ದು ಎಂಬುದು ಪ್ರಿಯಾಂಕಾಳ ಉತ್ತರವಾಗಿತ್ತು. ಇತ್ತೀಚೆಗೆ